ದಿನಾಂಕಃ 16.02.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಆರೋಪಿ ಪರ ಶ್ರೀ. ಬಿ.ಕೆ. ವಕೀಲರಿಂದಃ

ನಾನು ಗಾರೇ ಕೆಲಸ ಮಾಡುತ್ತೇನೆ. ದಿನಕ್ಕೆ ರೂ.900/- ವೇತನ ನೀಡುತ್ತಾರೆ. 2018 ರಲ್ಲಿ ರೂ. 600/- ಗಳನ್ನು ವೇತನ ನೀಡುತ್ತಿದ್ದರು. ನನ್ನ ಸ್ವಂತ ಮನೆ ಹಾಗೂ ವಾಸ ಕೆ.ಆರ್ ಪೇಟೆಯಲ್ಲಿ ಇರುತ್ತೇನೆ. ನನ್ನ ಬಳಿ ಜಮೀನು ಇರುವುದಿಲ್ಲ. ಸೈಟ್ ಇರುತ್ತದೆ. ನನಗೆ ಇಬ್ಬರು ಮಕ್ಕಳು. ಇಬ್ಬರು ಗ್ರಾಮ ಭಾರತಿ ಶಾಲೆ ಹಾಗೂ ಖಾಸಗಿ ಶಾಲೆಗೆ ಹೋಗುತ್ತಿದ್ದಾರೆ. ವರ್ಷಕ್ಕೆ ತಲಾ ರೂ. 17,000/- ಗಳನ್ನು ಇಬ್ಬರಿಗೂ ಶಾಲೆಗೆ ಕಟ್ಟುತ್ತೇನೆ. ನಾನು ಬಿ.ಪಿ.ಎಲ್ ಕಾರ್ಡ್ ಹೊಂದಿರುತ್ತೇನೆ. ವರ್ಷಕ್ಕೆ ಕುಟುಂಬದ ಖರ್ಚು ರೂ. 1,00,000/- ಇರುತ್ತದೆ. ತಿಂಗಳಿಗೆ ರೂ. 15000/- ಖರ್ಚು ಇರುತ್ತದೆ. ಮನೆಯಲ್ಲಿ ನಾನು ಹಾಗೂ ನನ್ನ ತಮ್ಮ ದುಡಿಮೆ ಮಾಡುತ್ತೇವೆ. ನನ್ನ ತಮ್ಮನಿಗೆ ಮದುವೆ ಆಗಿ ಅವರಿಗೆ ಇಬ್ಬರು ಮಕ್ಕಳು ಇರುತ್ತಾರೆ.

2017 ರಿಂದ 2020 ರವರೆಗೆ ನಾನು ಆದಾಯ ತೆರಿಗೆ ಪಾವತಿ ಮಾಡಿರುತ್ತೇನೆ ಹಾಗೂ ನಂತರದಲ್ಲಿ ಮಾಡಿರುವುದಿಲ್ಲ. ಸದರಿ ರಶೀದಿಗಳನ್ನು ಹಾಜರು ಮಾಡುಲು ಆಗುವುದಿಲ್ಲ. ಆದಾಯ ತೆರಿಗೆಯಲ್ಲಿ ಆರೋಪಿಗೆ ಹಣ ನೀಡಿರುವ ಬಗ್ಗೆ ನಮೂದು ಮಾಡಿರುವುದಿಲ್ಲ. ಸಾಲ ನೀಡಿರುವ ಬಗ್ಗೆ ಹೇಳಿರುವುದಿಲ್ಲ.

ಆರೋಪಿ ಕೇಂದ್ರ ಸರ್ಕಾರದ ಅಧೀನದ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು ತಿಂಗಳಿಗೆ 20 ರಿಂದ 25 ಸಾವಿರ ಸಂಬಳ ಪಡೆಯುತ್ತಿದ್ದು ಅವರಿಗೆ ಸಾಲ ಮಾಡುವ ಸಂಭವ ಇರುವುದಿಲ್ಲ ಎಂದರೆ ಸರಿಯಲ್ಲ. ಆದಾಯ ತೆರಿಗೆ ಪಾವತಿ ಮಾಡುವ ಸಂದರ್ಭದಲ್ಲಿ ನಮ್ಮ ಆದಾಯ ಹಾಗೂ ಖರ್ಚು, ಬ್ಯಾಂಕಿನಿಂದ ಸಾಲ ತೆಗೆದುಕೊಂಡಿರುವ ಬಗ್ಗೆ ಹಾಗೂ ಸಾಲವನ್ನು ನೀಡಿರುವ ಬಗ್ಗೆ ಹೇಳಬೇಕಾಗುತ್ತದೆ ಎಂದರೆ ಸರಿ. ಆರೋಪಿಯ ಮಗ 7 ರಿಂದ 8 ವರ್ಷಗಳ ಕಾಲ ನನ್ನ ಬಳಿ ಕೆಲಸ ಮಾಡುತ್ತಿದ್ದು ಆ ಸಂದರ್ಭದಲ್ಲಿ ರೂ. 20000/- ಮುಂಗಡ ಹಣ ಸಾಲವಾಗಿ ಪಡೆದು ಭದ್ರತೆಗಾಗಿ ಆರೋಪಿಯ ಚೆಕ್ ನೀಡಿದ್ದು ಸದರಿ ಚೆಕ್ಕನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ.

ಆರೋಪಿ ಮಗ ಈಗ ನನ್ನ ಹತ್ತಿರ ಕೆಲಸ ಮಾಡುತ್ತಿಲ್ಲ. ಆರೋಪಿಯ ಮಗ ನನ್ನ ಹತ್ತಿರ ಕೆಲಸ ಬಿಟ್ಟಿರುವುದರಿಂದ ಅವರು ನೀಡಿದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಅವರ ತಾಯಿಯ ವಿರುದ್ಧ/ಆರೋಪಿ ವಿರುದ್ಧ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ಮಗ ಹಾಗೂ ನಾನು ಚೆನ್ನಾಗಿ ಇರುತ್ತೇವೆ ಎಂದರೆ ಸರಿ. ನನ್ನ ಮೇಲೆ ಆರೋಪಿಯ ಮಗನಿಗೆ ಯಾವುದೇ ದ್ವೇಷ ಇರುವುದಿಲ್ಲ, ಹಾಗೂ ನನಗೂ ಅವರ ಮೇಲೆ ಯಾವುದೇ ದ್ವೇಷ ಇರುವುದಿಲ್ಲ. ನಿಪಿ 1 ರಲ್ಲಿ ಆರೋಪಿಯ ಬರವಣಿಗೆ ಇರುವುದಿಲ್ಲ ಹಾಗೂ ಸದರಿ

ದಾಖಲಾತಿಯನ್ನು ನಾನೇ ಬರೆದು ಆರೋಪಿಯ ವಿರುದ್ದ ಸುಳ್ಳು ದೂರನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಹಣವನ್ನು ನೀಡಬೇಕಾಗಿರುವುದಿಲ್ಲ ಹಾಗೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲುಃ ಇಲ್ಲ.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಗುಣವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)**

ಸಾ ಓ ಹೇ ಕೇ ಸ ಅದೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.